ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಭಜನೆ ಪ್ರಸ್ತಾವ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಸ್ಪಷ್ಟೀಕರಣಗಳೇನು; ಯಾವ ಕಾರಣಗಳಿಗಾಗಿ ವಿಭಜನೆ ಮಾಡಲು ಪ್ರಸ್ತಾವನೆಯನ್ನಿಡಲಾಗಿದೆ;

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಭಜನೆ ಕುರಿತು ತ್ರಿ–ಸದಸ್ಯ ತಜ್ಞರ ಸಮಿತಿಯನ್ನು ರಚಿಸಲಾಗಿದ್ದಲ್ಲಿ ಸಮಿತಿಯ ಕಾರ್ಯವ್ಯಾಪ್ತಿ ಮತ್ತು ಅಧ್ಯಯನ ವರದಿ ನೀಡಿಕೆಗೆ ನಿಗದಿ ಪಡಿಸಿರುವ ಕಾಲಾವಧಿ ಎಷ್ಟು;

ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಭಜನೆಗೆ ಜನಾಭಿಪ್ರಾಯ ಸಂಗ್ರಹಣೆಯನ್ನು ಸರ್ಕಾರ ಮಾಡಿದೆಯೇ; ವಿಭಜನೆಯ ಉಪಯುಕ್ತತೆ ಕುರಿತಾದ ಸಮರ್ಥನೆಗಳೇನು?

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :–

ಅ) ಹೌದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತದ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕರಿಗೆ ಉತ್ತಮ ಮೂಲಭೂತ ಸೌಕರ್ಯಗಳನ್ನು ಒದಗಿಸುವ ದೃಷ್ಟಿಯಿಂದ ಪಾಲಿಕೆಯನ್ನು ವಿಭಜಿಸಲು ನಿರ್ಧರಿಸಲಾಗಿರುತ್ತದೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿಭಜಿಸಲು ಸರ್ಕಾರವು ದಿನಾಂಕ: 22.09.2014 ರ ಆದೇಶದಲ್ಲಿ ಮೂರು ಸದಸ್ಯರುಗಳುಳ್ಳ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಗೆ ವಿಭಜನೆ ಮಾಡುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕೂಲಂಕುಷವಾಗಿ ಅಧ್ಯಯನ ಮಾಡಿ ವರದಿಯನ್ನು 3 ತಿಂಗಳೊಳಗಾಗಿ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಇ) ಪಾಲಿಕೆಯ ವಿಭಜನೆಗೆ ಜನಾಭಿಪ್ರಾಯ ಮತ್ತು ಉಪಯುಕ್ತತೆ ಕುರಿತು ಸಮಿತಿಯು ಪರಿಶೀಲಿಸುತ್ತದೆ.

ಕೈಗಾರಿಕೆಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಿಕೆ

1126 (2067) ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಹಾಸನ ಜಿಲ್ಲೆ ಮತ್ತು ತಾಲ್ಲೂಕು ಪ್ರದೇಶಗಳಲ್ಲಿ ವಿವಿಧ ವರ್ಗದ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಜಿಲ್ಲೆಯ ಅಭಿವೃದ್ಧಿ ಪೂರಕವಾಗುವಂತೆ ಮಾಡಲು ಸರ್ಕಾರದ ಮುಂದಿರುವ ಪ್ರಸ್ತಾವನೆಗಳೇನು;

ಆ) ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ ಎಷ್ಟು ವಿವಿಧ ವರ್ಗದ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರೋತ್ಸಾಪಿಸಲಾಗಿದೆ? ಎಷ್ಟು ಕೈಗಾರಿಕೆಗಳು ಪ್ರಸ್ತುತ ಜಿಲ್ಲೆಯಲ್ಲಿ ಕಾರ್ಯಾರಂಭಗೊಂಡಿದೆ;

ಇ) ಈಗಿರುವ ಕೈಗಾರಿಕೆಗಳ ಮೂಲಕ ಸೃಷ್ಟಿಸಿರುವ ಉದ್ಯೋಗಳು ಹಾಗೂ ಕೈಗಾರಿಕಾ ಘಟಕಗಳಿಗೆ ಸರ್ಕಾರ ಮಂಜೂರು ಮಾಡಿರುವ ಜಮೀನು ಮತ್ತಿತರ ಸೌಲಭ್ಯಗಳೇನು ?

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :–

ಅ) ಹಾಸನ ಜಿಲ್ಲೆಯಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾಗುವಂತೆ ಕೈಗಾರಿಕಾ ಪ್ರದೇಶಗಳನ್ನು ಹಾಸನದ ಕೈಗಾರಿಕಾ ಬೆಳವಣಿಗೆ ಕೇಂದ್ರದಲ್ಲಿ 951.55 ಎಕರೆ, ಬಿ.ಕಾಟಿಹಳ್ಳಿಯಲ್ಲಿ 94.70 ಎಕರೆ, ಹೊಳೆನರಸೀಪುರದಲ್ಲಿ 28 38 ಎಕರೆ ತಿಮ್ಮನಹಳ್ಳಿಯಲ್ಲಿ 75.03 ಎಕರೆಗಳ ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಇದರ ಜೊತೆಗೆ ವಿಶೇಷ ಆರ್ಥಿಕ ವಲಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಜವಳಿ–576.50 ಎಕರೆಗಳು, ಫಾರ್ಮ 270.07 ಎಕರೆ ಆಹಾರ ಸಂಸ್ಕರಣೆ 284.98 ಎಕರೆ ಹಾಗೂ ಹಾರ್ಡ್‌ವೇರ್ 250.00 ಎಕರೆಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.

ಕೆಎಸ್‌ಎಸ್‌ಐಡಿಸಿ ಸಂಸ್ಥೆಯು ಹಾಸನ, ಅರಸೀಕೆರೆ, ಗಂಡಸಿ, ಚನ್ನರಾಯಪಟ್ಟಣ, ಹೊಳೆನರಸೀಪುರ, ಸಕಲೇಶಪುರ, ಮತ್ತು ಬೇಲೂರುಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿ ಪಳಿಗೆಗಳ ನಿರ್ಮಾಣ ಹಾಗೂ ನಿವೇಶನಗಳನ್ನು ಅಭಿವೃದ್ಧಿಪಡಿಸಿದೆ.

ರಾಜ್ಯಮಟ್ಟದ ಉನ್ನತ ಸಮಿತಿ ಹಾಗೂ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಇತ್ಯರ್ಥಗೊಳಿಸಿದ ಉದ್ಯಮಗಳ ಸ್ಥಾಪನೆಗೆ ಜಿಲ್ಲಾಮಟ್ಟದಲ್ಲಿ ಸಂಪೂರ್ಣ ಬೆಂಬಲ ಸೇವೆ ನೀಡಲಾಗುತ್ತಿದೆ. ಈ ಎರಡು ಸಮಿತಿಗಳಿಂದ ಕಳೆದ ಮೂರು ವರ್ಷಗಳಲ್ಲಿ 25 ಉದ್ಯಮಗಳು ಅನುಮೋದನೆಯಾಗಿದ್ದು, ವಿವಿಧ ಅನುಷ್ಠಾನ ಹಂತದಲ್ಲಿರುತ್ತವೆ. ಈ ಪೈಕಿ 3 ಕೈಗಾರಿಕೆಗಳು ಕಾರ್ಯಾರಂಭಗೊಂಡಿರುತ್ತವೆ.

ವಿಶೇಷ ಆರ್ಥಿಕ ವಲಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಹೊರ ರಾಜ್ಯಗಳಿಂದ ಉದ್ಯಮಿಗಳನ್ನು ಆಕರ್ಷಿಸಲು ರೋಡ್‌ಶೋ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಹಾಸನ ಜಿಲ್ಲೆಗೆ ಬಂಡವಾಳ ಆಕರ್ಷಿಸಲು ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಸಹ ಆಯೋಜಿಸಲ ಕ್ರಮ ಕೈಗೊಳ್ಳಲಾಗುತ್ತಿದೆ.

ಸರ್ಕಾರದ ನೂತನ ಕೈಗಾರಿಕಾ ನೀತಿ 2014–19ರಲ್ಲಿ ಸತತ ಕೈಗಾರಿಕೆಗಳ ಬೆಳವಣಿಗೆಗಾಗಿ ಬೆಂಗಳೂರು–ಹಾಸನ–ಮಂಗಳೂರು ಮಾರ್ಗದಲ್ಲಿ ಕೈಗಾರಿಕಾ ಕಾರಿಡಾರ್ ಹಾಗೂ ವಿಶೇಷ ಬಂಡವಾಳ ವಲಯವನ್ನು ಹಾಸನದಲ್ಲಿ ಸ್ಥಾಪಿಸಲು ಹೆಚ್ಚಿನ ವಿಶೇಷ ಒತ್ತು ನೀಡಲಾಗಿರುತ್ತದೆ.

ಕೈಗಾರಿಕಾ ನೀತಿ 2014–19 ರಲ್ಲಿ ಬೃಹತ್ ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ಯಮಿಗಳಿಗೆ ಪ್ರೇರಕವಾಗುವಂತೆ ಈ ಹಿಂದಿನ ಎಲ್ಲಾ ಕೈಗಾರಿಕಾ ರೀತಿಗಳಿಗಿಂತ

ಹೆಚ್ಚಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳಾದ ಬಂಡವಾಳ ಹೂಡಿಕೆ ಸಹಾಯಧನ, ಮುದ್ರಾಂಕ ಶುಲ್ಕ ವಿನಾಯಿತಿ, ಪ್ರವೇಶ ತೆರಿಗೆ ವಿನಾಯಿತಿ, ಅತೀ ಸಣ್ಣ ಉತ್ಪಾದನ ಘಟಕಗಳಿಗೆ ಬಡ್ಡಿ ಸಹಾಯಧನ. ಎ.ಪಿ.ಎಂ.ಸಿ. ಸೆಸ್ ವಿನಾಯಿತಿ, ಉತ್ಪನ್ನಗಳ ಖರೀದಿಯಲ್ಲಿ ಆದ್ಯತೆ, ವಿದ್ಯುತ್ ಶಕ್ತಿ ಶುಲ್ಕ ವಿನಾಯಿತಿ, ಭೂ ಪರಿವರ್ತನಾ ಶುಲ್ಕ ವಿನಾಯಿತಿ, ತಂತ್ರಜ್ಞಾನ ನವೀಕರಣ ಹಾಗೂ ಗುಣಮಟ್ಟ ಪ್ರಮಾಣೀಕರಣ ಪತ್ರ ಪಡೆದ ಎಂಎಸ್ಎಂಇಗಳಿಗೆ ಪ್ರೋತ್ಸಾಹಧನ ಮುಂತಾದವುಗಳನ್ನು ಒದಗಿಸಲಾಗುವುದು.

ಆ) ಕಳೆದ ಮೂರು ವರ್ಷಗಳಲ್ಲಿ ಜನರಲ್ ಇಂಜಿನಿಯರಿಂಗ್, ಅಕ್ಕಿ ಗಿರಣಿ, ಫ್ಯಾಬ್ರಿಕೇಷನ್, ಸಿಮೆಂಟ್ ಬ್ರಿಕ್ಸ್, ಮುದ್ರಣ, ಬೇಕರಿ ಉತ್ಪನ್ನಗಳು, ಅಟೋಮೋಬೈಲ್, ಸಿದ್ದ ಉಡುಪು, ಕೃಷಿ ಉಪಕರಣ ಹಾಲು ಸಂಸ್ಕರಣೆ ಗ್ರಾನೈಟ್ ಕಟ್ಟಿಂಗ್ ಅಂಡ್ ಪಾಲಿಸಿಂಗ್ ತೆಂಗಿನ ನಾರಿನ ಉತ್ಪನ್ನಗಳು ಫೀಡೋಪಕರಣಗಳು, ಕೃಷಿ ಆಧಾರಿತ ಉತ್ಪನ್ನಗಳು ಹಾಗೂ ಇತ್ಯಾದಿ ಪದಾರ್ಥಗಳ ತಯಾರಿಕೆಯಲ್ಲಿ ತೊಡಗಿರುವ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಗಿರುತ್ತದೆ. ಹಾಸನದ ಕೈಗಾರಿಕಾ ಬೆಳವಣಿಗೆ ಕೇಂದ್ರ ಹಾಗೂ ವಿಶೇಷ ಆರ್ಥಿಕ ವಲಯದಲ್ಲಿ (SEZ) 25 ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಗಿದ್ದು, ಇವುಗಳಲ್ಲಿ 5 ಕೈಗಾರಿಕೆಗಳು ಕಾರ್ಯಚಟುವಟಿಕೆಗಳಲ್ಲಿ ತೊಡಗಿರುತ್ತದೆ.

1. ಕಳೆದ ಮೂರು ವರ್ಷಗಳಲ್ಲಿ ಎಸ್ಎಚ್ಎಲ್ಸಿಸಿ ಹಾಗೂ ಎಸ್ಎಲ್ಎಸ್ಡಬ್ಲ್ಯೂಸಿಸಿ ಮುಖೇನ ಅನುಮೋದಿಸಲ್ಪಟ್ಟ ಕೈಗಾರಿಕಾ ಪ್ರಸ್ತಾವನೆಗಳ ಪೈಕಿ 3 ಕಾರ್ಯರಂಭ ಮಾಡಿದೆ.

2. ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ 2.127 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಳು ಸ್ಥಾಪನೆಯಾಗಿದ್ದು ರೂ.7,180.63 ಲಕ್ಷ ಬಂಡವಾಳ ಹೂಡಿಕೆ ಮಾಡಿ 6.965 ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿರುತ್ತದೆ ಕೆಳಗಿನಂತಿವೆ.

ಕ್ರ.ಸಂ	ವರ್ಷ ಸಂಖ್ಯೆ	ಘಟಕಗಳ (ಲಕ್ಷ ರೂ.ಗಳಲ್ಲಿ)	ಬಂಡವಾಳ ಹೂಡಿಕೆ ಸಂಖ್ಯೆ	ಉದ್ಯೋಗ
1	2011-12	658	1,342.43	2041
2	2012-13	737	2,578.53	2383
3	2013-14	732	3,259.67	2541
	ಒಟ್ಟು	2127	7,180.63	6965

3. ಕಳೆದ ಮೂರು ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಅತಿಸಣ್ಣ, ಸಣ್ಣ ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ನೀಡಿರುವ ಪ್ರೋತ್ಸಾಹದ ವಿವರಗಳು ಕೆಳಗಿನಂತಿವೆ.

(ರೂ.ಲಕ್ಷಗಳಲ್ಲಿ)

ಕ್ರ.ಸ.	ಯೋಜನೆ ವಿವರ	2011–12		2012–13		2013–14	
		ಘಟಕಗಳ ಸಂಖ್ಯೆ	ಮೊಬಲಗು ಸಂಖ್ಯೆ	ಘಟಕಗಳ	ಮೊಬಲಗು	ಘಟಕಗಳ	ಮೊಬಲಗು
1	ಬಂಡವಾಳ ಹೂಡಿಕೆ ಸಹಾಯಧನ	6	15.04	8	417	2	12.95
2	ಮುದ್ರಾಂಕ ಶುಲ್ಕ ವಿನಾಯಿತಿ & ವಿನಾಯಿತಿ ದರ ನೋಂದಣಿ	46	–	37	–	35	–
3	ಪ್ರವೇಶ ತೆರಿಗೆ ವಿನಾಯಿತಿ	15	–	22	–	4	–
4	ಭೂ ಪರಿವರ್ತನಾ ಶುಲ್ಕ ಮರುಪಾವತಿ	1	0 123	–	–	–	–
5	ಎ.ಪಿ.ಎಂ ಸಿ.ಸೆಸ್ ಪ್ರಮಾಣ ಪತ್ರ	–	–	–	–	–	–

ಇ) ಕಳೆದ ಮೂರು ವರ್ಷ ಗಳಲ್ಲಿ 90.51 ಎಕರೆ ಭೂಮಿಯನ್ನು 25 ಕೈಗಾರಿಕೆಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಈ ಕೈಗಾರಿಕೆಗಳು ಉತ್ಪಾದನೆ ಪ್ರಾರಂಭಿಸಿದ ನಂತರ ಒಟ್ಟು 1828 ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತವೆ. ಇವುಗಳ ಪೈಕಿ ಈಗಾಗಲೇ 5 ಕೈಗಾರಿಕೆಗಳು ಉತ್ಪಾದನೆ ಪ್ರಾರಂಭಿಸಿದ್ದು, ರೂ. 338.29 ಕೋಟಿ ಬಂಡವಾಳ ಹೂಡಿ, 921 ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿರುತ್ತವೆ. ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಸ್ಥಾಪಿಸುವ ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ವಿದ್ಯುತ್ ಹಾಗೂ ನೀರು ಸರಬರಾಜು ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.

ಯೋಜನಾ ಸೌಲಭ್ಯಗಳ ಅನುಷ್ಠಾನ

1127 (2068) ಶ್ರೀ ಬಾಲಕೃಷ್ಣ ಪಿ.ಎನ್. (ಶ್ರವಣಬೆಳಗೊಳ) :– ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–